

ಮೋಹನ ಹಬ್ಬು

# ನೀರ ಮೇಲಣ ಗುಳ್ಳೆ

ಬೆಳಗಿನ ನಾಲ್ಕು ಗಂಟೆಗೇ ಎಚ್ಚರವಾಯಿತು. ಇಷ್ಟು ಬೇಗ ಎದ್ದು ಮಾಡುವುದಾದರೂ ಏನು ಎಂದುಕೊಳ್ಳುತ್ತ ಹಾಸಿಗೆಯ ಮೇಲೆ ಮಗ್ಗಲು ಹೊರಳಿಸುತ್ತಾ ಕಾಲ ಕಳೆದರು. 'ಇನ್ನು ನಿದ್ದೆ ಮಾಡಿದ ಹಾಗೆ' ಎನ್ನುತ್ತ ಹಾಸಿಗೆಯಿಂದೆದ್ದು ಕುಳಿತು ಗಡಿಯಾರದತ್ತ ಕಣ್ಣು ಹಾಯಿಸಿದರು. ಇನ್ನೂ ನಾಲ್ಕೂವರೆ. ಮನೆ ನೀರವದಲ್ಲಿ ಮೀಯುತ್ತಿತ್ತು. ಎದ್ದು ಮುಖಪ್ರಕ್ಷಾಲನ ಮಾಡಿ ಶೌಚಾಲಯ ಸೇರಿಕೊಂಡರು. ಕೈಕಾಲು ತೊಳೆದು ಟವೆಲ್‌ನಿಂದ ಒರೆಸಿಕೊಳ್ಳುತ್ತ ಕೂತರು. ಬೆಳಗಾಗುತ್ತಿಲ್ಲ. ಮುಚ್ಚಿದ ಕಿಟಕಿಯ ಬಾಗಿಲು ತೆರೆದರು. ರಸ್ತೆದೀಪಗಳಿಂದ ಬೆಳಕು ನುಗ್ಗಿ ಬಂತು. ಹಾಸಿಗೆಯ ತಲೆಯ ಮೇಲಿಟ್ಟಿದ್ದ ವಿಷ್ಣುಸಹಸ್ರನಾಮದ ಪುಸ್ತಕ ತೆಗೆದು ಪಠಣ ಪ್ರಾರಂಭಿಸಿದರು. ನಸುಕು ಹರಿಯುತಿದ್ದಂತೆ, ಅಡುಗೆ ಕೋಣೆಗೆ ಹೋಗಿ ಕಾಫಿ ತಯಾರಿಸುವ ಸಿದ್ಧತೆ ನಡೆಸಿದರು. ಮುಂಬಾಗಿಲನ್ನು ತೆರೆದು ಹೊರಗೆ ಬಂದು ಮನೆಯ ಮುಂಭಾಗದ ಅಂಗಳದಲ್ಲಿ ಈಚೆಯಿಂದಾಚೆ, ಆಚೆಯಿಂದೀಚೆ ಹೆಜ್ಜೆ ಹಾಕಿದರು. ಅದಾಗಲೇ ಎದುರಿನ ರಸ್ತೆಯಲ್ಲಿ ಆಟೊ, ಕಾರ್, ಬಸ್ ಮುಂತಾದ ವಾಹನಗಳು ದಿನದ ಓಟ ಪ್ರಾರಂಭಿಸಿದ್ದವು. ಸ್ನಾನ, ಪೂಜೆ ಮುಗಿಸುವಾಗ ಎಂಟು ಗಂಟೆ. ಬಟ್ಟೆ ಧರಿಸಿ, ರಸ್ತೆಗೆ ಬಂದು ಸರ್ಕಲ್‌ನ ಆಚೆ ನಡೆದು ತಮ್ಮ ಎಂದಿನ ದರ್ಶಿನಿಯಲ್ಲಿ ಎಂದಿನ ಇಡ್ಲಿ, ಸಾಂಬಾರ್ ತಿಂದು ಕಾಫಿ ಕುಡಿದು ಮನೆಗೆ ಮರಳಿದರು.

ಬೆಳಿಗ್ಗೆ ಒಂಬತ್ತು. ಹಜಾರದಲ್ಲಿ ಕಿಟಕಿಗೆ ಬೆನ್ನು ಮಾಡಿ ಪತ್ರಿಕೆ ಓದುವುದರಲ್ಲಿ ತಲ್ಲೀನರಾದರು. ಅನಾಮತ್ತಾಗಿ ನೆರಳೊಂದು ಪತ್ರಿಕೆಯ ಮೇಲೆ ಹಾದು, ಅಕ್ಷರಗಳೆಲ್ಲ ಮಸುಕಾಗಿ, ಹಿಂದಕ್ಕೆ ತಲೆ ಹೊರಳಿಸಿ ನೋಡಿದರೆ ಪಕ್ಕದ ನಿಸರ್ಗ ರೆಸಿಡೆನ್ಸಿಯ ಎರಡನೇ ಮಹಡಿಯ ನಿವಾಸಿ ಶ್ರೀನಿವಾಸ್ ರಾವ್! ಬೆಳಗಾಗುತ್ತಿದ್ದಂತೆ ಈತನ ಮುಖದರ್ಶನ ಎಂದರೆ ಕೆಲಸ ಕೆಟ್ಟ ಹಾಗೆ. ಕನಿಷ್ಠ ಒಂದು ಗಂಟೆ ಕೊರೆಯದೇ ಬಿಡುವ ಆಸಾಮಿ ಅಲ್ಲ ಎಂದುಕೊಳ್ಳುತ್ತ, ಕಿರುನಗೆ ಬೀರಿ 'ಬನ್ನಿ' ಎಂದರು. ಮಾತಿನಲ್ಲೇ ದೇಶ ಸುತ್ತುತ್ತಿದ್ದ ರಾಯರನ್ನು ನಡುವೆ ತಡೆದು 'ಒಂದ್ನಿಮಿಷ, ರಾವ್ ಅವರೆ!

